ಕಂಡು ಮೈದಾನದಲ್ಲಿದ್ದವರಲ್ಲಿ ಆತಂಕ ಹೆಚ್ಚಾಯಿತು.

ಮುಖ್ಯಮಂತ್ರಿಗಳಿಗೆ ಮನವಿ ಪತ್ರ ಕೊಡಲು ಹತ್ತು ವರ್ಷಗಳಿಂದ ಮುಚ್ಚಿರುವ ತಾಲ್ಲೂಕಿನ ಶಾರದಾ ಶುಗರ್ ಫ್ಯಾಕ್ಟರಿಯ ಕಾರ್ಮಿಕರು, ಚಲ್ಮೇಶ ಸಿಮೆಂಟ್ ಕಾರ್ಖಾನೆಯ ಕಾರ್ಮಿಕ ಮುಖಂಡರು, ಅಂಗನವಾಡಿ ಕಾರ್ಯಕರ್ತರು, ನಿವೃತ್ತ ಸರ್ಕಾರಿ ನೌಕರರು, ನಿರುದ್ಯೋಗಿಗಳು, ವೃದ್ಧಾಪ್ಯ ವೇತನ ಬರುತ್ತಿಲ್ಲವೆಂದು ದೂರು ಕೊಡಲು ಬಂದವರೂ ಸೇರಿದಂತೆ ಹತ್ತನ್ನೆರಡು ಸಾವಿರ ಜನರು ಬಂದಿದ್ದರು.

ಕೆಲವರು ಮುಖ್ಯಮಂತ್ರಿ ಎದುರು ಕಪ್ಪು ಬಾವುಟ ಪ್ರದರ್ಶನ ಮಾಡಬಹುದೆಂದು ಇಂಟೆಲಿಜೆನ್ಸ್ ವರದಿ ಬಂದಿದೆಯಂತೆ 'ಅದಕ್ಕೆ ಈ ಪಾಟಿ ಪೊಲೀಸರು' ಎಂದು ಯಾರೋ ಹೇಳಿದರು. ಎಲ್ಲರಲ್ಲೂ ಕುತೂಹಲ ಹೆಚ್ಚುತ್ತ ಹೋಯಿತು.

ಜಿಲ್ಲೆಯಲ್ಲಿ ಬರ ಇರುವಾಗ ಮುಖ್ಯಮಂತ್ರಿ ಗ್ರಾಮ ಸಾಂತ್ವನದ ಹೆಸರಿನಲ್ಲಿ ದುಂದು ವೆಚ್ಚ ಮಾಡುತ್ತಿದ್ದಾರೆಂದು ವಿರೋಧ ಪಕ್ಷಗಳ ಕಾರ್ಯಕರ್ತರು ಪ್ರತಿಭಟನೆ ಮಾಡ್ತಾರಂತೆ ಎಂಬ ಮಾತು ಕೇಳಿ ಆತಂಕಗೊಂಡಿದ್ದು ಹೊಸಳ್ಳಿ ಜನರಷ್ಟೇ. ಪರ ಊರುಗಳಿಂದ ಬಂದವರಲ್ಲಿ ಇಂತಹ ಆತಂಕವೇನೂ ಕಾಣಲಿಲ್ಲ. ಹತ್ತು ನಿಮಿಷಗಳ ಹಿಂದೆ ಬಂದ ಪೊಲೀಸರು ಎಲ್ಲೆಲ್ಲಿ ಜನರು ಹೆಚ್ಚಾಗಿದ್ದಾರೊ ಅಲ್ಲೆಲ್ಲ ಹೋಗಿ ನಿಂತು ಮುಖ್ಯಮಂತ್ರಿ ಬಂದಾಗ ಶಿಸ್ತಿನಿಂದ ವರ್ತಿಸುವಂತೆ ಹೇಳತೊಡಗಿದರು.

ಮುಖ್ಯಮಂತ್ರಿಗಳ ಹೆಲಿಕಾಪ್ಟರು ಬಂದಾಗ ಎಲ್ಲರೂ ಅಲ್ಲಲ್ಲೇ ಇರಬೇಕು. ಯಾರೂ ಮುಂದೆ ಬರಬಾರದು. ಪೊಲೀಸರ ಜತೆ ಸಹಕರಿಸಬೇಕು. ಕಾರ್ಯಕ್ರಮಗಳು ಯಶಸ್ವಿಯಾಗಲು ಜನರ ಸಹಕಾರ ಬೇಕು ಎಂದು ಮೈಕ್‌ನಲ್ಲಿ ಮನವಿ ಮಾಡುತ್ತಲೇ ಇದ್ದರು. ಕ್ಷಣ ಕ್ಷಣಕ್ಕೂ ಕುತೂಹಲ ಹೆಚ್ಚುತ್ತ ಹೋಯಿತು. ಹಿರಿಯ ಅಧಿಕಾರಿಗಳು ಮತ್ತು ಪೊಲೀಸರು ನಿಂತಲ್ಲೇ ಚಡಪಡಿಸಿದರು.

ವಲಯ ಡಿಐಜಿ ಸಾಹೇಬರು, ಡೀಸಿ ರೋಹಿಣಿ ರೆಡ್ಡಿ ಮುಖ್ಯಮಂತ್ರಿ ಮತ್ತು ಜಿಲ್ಲಾ ಉಸ್ತುವಾರಿ ಮಂತ್ರಿಯವರನ್ನು ಬರ ಮಾಡಿಕೊಳ್ಳಲು ಸಿದ್ಧರಾಗಿ ನಿಂತಿದ್ದರು. ಅವರ ಪಕ್ಕ ಕೆಂಪು ಗುಲಾಬಿ ಹೂಗಳೇ ಇದ್ದ ಎರಡು ದೊಡ್ಡ ಗುಚ್ಛಗಳನ್ನು ಹಿಡಿದು ಒಬ್ಬ ನಿಂತಿದ್ದ. ಬೆಂಗಳೂರಿನಿಂದ ಬಂದ ಟೀವಿಯವರು, ಕ್ಯಾಮೆರಾದವರು, ಪತ್ರಕರ್ತರು ಇನ್ನೊಂದು ಮಗ್ಗುಲಲ್ಲೇ ಹರಟುತ್ತ ನಿಂತಿದ್ದರು. ಹೆಲಿಪ್ಯಾಡ್ ಸುತ್ತ ನಿಂತವರೆಲ್ಲ ಗೊಲ್ಲಳ್ಳಿ ತೋಪಿನ ದಿಕ್ಕಿನ ಕಡೆ ಆಕಾಶದತ್ತ ದಿಟ್ಟಿಸತೊಡಗಿದರು. ದೂರದಲ್ಲಿ ಆಕಾಶದಲ್ಲಿ ಹೆಲಿಕಾಪ್ಟರ್ ಸಣ್ಣ ಹಕ್ಕಿಯಂತೆ ಬರುತ್ತಿರುವುದು ಕಾಣಿಸಿತು. ''ಅಗೋ ಅಲ್ಲಿ'' ಎಂದು ಯಾರೊ ಒಬ್ಬ ಕೂಗಿದ. ಹೆಲಿಕಾಪ್ಟರ್ ಕಂಡೀತೇ ಎಂದು ಎಲ್ಲರೂ ಆಕಾಶ ದಿಟ್ಟಿಸತೊಡಗಿದರು. ಜನರ ಉದ್ವೇಗ ಹೆಚ್ಚಾಯಿತು. ಕೆಲವರು ಹೋ ಎಂದು ಕೂಗಿ ಕೇಕೆ ಹಾಕ ತೊಡಗಿದರು.

ಹೆಲಿಕಾಪ್ಟರು ಇಳಿಯುವ ಜಾಗದ ಸುತ್ತ ಸಾಕಷ್ಟು ನೀರು ಚೆಲ್ಲಿ ದೂಳು ಏಳದಂತೆ ನೋಡಿಕೊಂಡಿದ್ದರೂ ಅಸಾಧ್ಯ ಎನ್ನಿಸುವಷ್ಟು ದೂಳೆದ್ದಿತು. ಕೆಲ ಕ್ಷಣಗಳು ಹೆಲಿಕಾಪ್ಟರು ಕಾಣಲೇ ಇಲ್ಲ. ದೂಳು ಕ್ರಮೇಣ ಅಡಗಿದ ಮೇಲೆ ಮುಖ್ಯಮಂತ್ರಿ ಹೆಲಿಕಾಪ್ಟರಿನಿಂದ ಇಳಿಯುತ್ತಿರುವುದು ಕಾಣಿಸಿತು. ಜನ 'ಮುಖ್ಯಮಂತ್ರಿಯವರಿಗೆ ಜಯವಾಗಲಿ' ಎಂದು ಜಯಕಾರ ಹಾಕತೊಡಗಿದರು.

ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ ಮುಖ್ಯಮಂತ್ರಿಯೊಬ್ಬರು ತಮ್ಮ ಊರಿಗೆ ಬಂದರೆಂಬ ಸಂತೋಷ ಹೊಸಳ್ಳಿಯ ಜನರಿಗೆ. ಮುಖ್ಯಮಂತ್ರಿ ಕೈ ಜೋಡಿಸಿಕೊಂಡೇ ಎಲ್ಲರಿಗೂ ನಮಸ್ಕಾರ ಹೇಳುತ್ತ ನಡೆದು ಬರ ತೊಡಗಿದರು. ಅಷ್ಟರಲ್ಲಿ ಸ್ವಲ್ಪವೇ ದೂರದಲ್ಲಿ ನಿಂತಿದ್ದ ಜನರ ಗುಂಪಿನಿಂದ ಕೆಲವರು ಹೊರ ಬಂದು ಅಡಗಿಸಿಟ್ಟುಕೊಂಡಿದ್ದ ಕಪ್ಪು ಬಟ್ಟೆಗಳನ್ನು ಹೊರ ತೆಗೆದು ಕೈಯಲ್ಲಿಡಿದು ಬೀಸುತ್ತ, ಮುಖ್ಯಮಂತ್ರಿಗೆ ಧಿಕ್ಕಾರ ಕೂಗುತ್ತ ಅವರ ಕಡೆಗೆ ನುಗ್ಗ ತೊಡಗಿದರು! ಅಡ್ಡ ಬಂದ ಪೊಲೀಸರನ್ನು ತಳ್ಳಿಕೊಂಡು ಮುಂದೆ ಬಂದರು. ತಕ್ಷಣವೇ ಪೊಲೀಸರು ಮುಖ್ಯಮಂತ್ರಿಯವರನ್ನು ಸುತ್ತುವರಿದರು.